ಫ್ಯಾಕ್ಸ್ : [91-080]23332521 ದೂರವಾಣಿ : 23332521/23330153[259]

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಡಳಿತಾಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು – 560 065

ಸಂಖ್ಯೆ: ಆಕ/ಸಾ.ವಿ/ ನ್ಯಾಯಾಲಯದ ಪ್ರಕರಣಗಳು/3791/2022-23 ದಿನಾಂಕ: 29/04/2022

## ಸು ತ್ತೋ ಲೆ

**ವಿಷಯ:** ನ್ಯಾಯಾಲಯ ಪ್ರಕರಣಗಳ ಪ್ರತಿ ಹಂತದಲ್ಲಿ ಸಮಯದ ಮಿತಿ ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸುವ – ಕುರಿತು.

**ಉಲ್ಲೇಖ:**
1. ಸರ್ಕಾರದ ದಿನಾಂಕ:16/03/2022 ರ ಪತ್ರದ ಸಂಖ್ಯೆ: Agri-RI/09/2022
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-ರವರ ದಿನಾಂಕ: 31/01/2022ರ ಸುತ್ತೋಲೆ ಸಂಖ್ಯೆ: ಲಾ-ಎಲ್‌ಎಎಂ/14/2022
3. ಕುಲಪತಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು- ರವರ ಅನುಮೋದನೆ ದಿನಾಂಕ: 28/04/2022

><<>><<>><

ಸರ್ಕಾರವು ಉಲ್ಲೇಖ-1ರ ದಿನಾಂಕ: 16/03/2022ರ ಪತ್ರಕ್ಕೆ ಉಲ್ಲೇಖ-2ರ ದಿನಾಂಕ: 31/01/2022ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆಯನ್ನು ಲಗತ್ತಿಸಿ, ಮುಂಧಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ನ್ಯಾಯಾಲಯದ ಪ್ರಕರಣಗಳ ಪ್ರತಿ ಹಂತದಲ್ಲಿ ಸರ್ಕಾರದ ದಿನಾಂಕ: 31/01/2022ರ ಸುತ್ತೋಲೆಯಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಈ ಮೂಲಕ ತಿಳಿಯಪಡಿಸಲಾಗಿದೆ.

ಆದೇಶದ ಮೇರೆಗೆ

ಆಡಳಿತಾಧಿಕಾರಿಗಳು

**ಅಡಕ:** ಸರ್ಕಾರದ ದಿನಾಂಕ: 31/01/2022ರ ಸುತ್ತೋಲೆಯ ಪ್ರತಿ

**ಪ್ರತಿಗಳು:**
1. ಬೆಂಗಳೂರು ಕೃಷಿವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ.
2. ಕುಲಪತಿಗಳ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಗಾ.ಕೃ.ವಿ.ಕೇ., ಬೆಂಗಳೂರು.
3. ಕಛೇರಿ ಕಡತಕ್ಕೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಲಾ-ಎಲ್‌ಎಎಂ/14/ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ: 31.01.2022

## ಸುತ್ತೋಲೆ

ವಿಷಯ: ರಾಜ್ಯ ಸರ್ಕಾರ, ಮಂಡಳಿಗಳು/ನಿಗಮಗಳು ಅಥವಾ ಪ್ರಾಧಿಕಾರಗಳು ಅಥವಾ ಸ್ವಾಯತ್ತ ಸಂಸ್ಥೆಗಳು ಪಕ್ಷವಾಗಿರುವ ನ್ಯಾಯಾಲಯ ಪ್ರಕರಣಗಳ ಪ್ರತಿ ಹಂತದಲ್ಲಿ ಸಮಯದ ಮಿತಿ ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸುವ ಬಗ್ಗೆ.

*****

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನ್ಯಾಯ ನಿಂದನ ಪ್ರಕರಣ ಸಂಖ್ಯೆ: 560/2021ರಲ್ಲಿ ದಿನಾಂಕ 13.1.2022ರಂದು ನೀಡಿರುವ ನಿರ್ದೇಶನಗಳನ್ವಯ, ಕಾನೂನು ಸುವ್ಯವಸ್ಥೆಯನ್ನು ರಕ್ಷಿಸಲು ಮತ್ತು ಭಾರತ ಸಂವಿಧಾನದ ಅನುಚ್ಛೇದ 14 ಮತ್ತು 21ರಡಿಯಲ್ಲಿ ನಾಗರಿಕರ ಹಕ್ಕುಗಳನ್ನು ರಕ್ಷಿಸಲು ಹಾಗೂ ರಾಜ್ಯದ ಹಿತಾಸಕ್ತಿಯನ್ನು ರಕ್ಷಿಸಲು ರಾಜ್ಯ ಸರ್ಕಾರವು ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಿದೆ:-

1. ನ್ಯಾಯಾಲಯವು ಆದೇಶಗಳನ್ನು ಜಾರಿಗೊಳಿಸಿದಾಗ, ಆದೇಶಗಳು ಕಾನೂನಿಗೆ ಅನುಗುಣವಾಗಿಲ್ಲದಿದ್ದರೆ, ಬಾಧಿತ ಪ್ರಾಧಿಕಾರಗಳು ನಿಗದಿತ ಸಮಯದೊಳಗೆ ಮೇಲ್ಮನವಿ ಸಲ್ಲಿಸಬೇಕು.
2. ಯಾವುದೇ ನ್ಯಾಯಾಲಯ ಅಥವಾ ಪ್ರಾಧಿಕಾರವು ಜಾರಿಗೊಳಿಸಿದ ಆದೇಶವು ಅಂತಿಮ ಹಂತವನ್ನು ತಲುಪಿದ ನಂತರ, ಉನ್ನತ ಪ್ರಾಧಿಕಾರಗಳು ಅಥವಾ ಉನ್ನತ ನ್ಯಾಯಾಲಯಗಳು ಸದರಿ ಆದೇಶವನ್ನು ರದ್ದುಗೊಳಿಸದ ಹೊರತು ಪ್ರಾಧಿಕಾರಗಳು ರಾಜ್ಯ ಸರ್ಕಾರದ ಹಿತದೃಷ್ಟಿಯಿಂದ, ಈ ಆದೇಶವನ್ನು ಅಕ್ಷರಶ: ಅನುಷ್ಠಾನಗೊಳಿಸಲು ಬದ್ಧರಾಗಿರಬೇಕು.
3. ನೊಂದ ವ್ಯಕ್ತಿಗಳು ನ್ಯಾಯಾಲಯವನ್ನು ನ್ಯಾಯ ದೇಗುಲವೆಂದು ಪರಿಗಣಿಸಿ, ಕೊನೆಯ ಪರಿಹಾರವಾಗಿ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ದಾಖಲಿಸುವ ಮೂಲಕ ನ್ಯಾಯಾಲಯದ ಮೆಟ್ಟಿಲೇರುತ್ತಾರೆ. ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಮರುಪರಿಶೀಲನೆ ಸಲ್ಲಿಸಲು ಅಥವಾ ನ್ಯಾಯಾಲಯದ ಮುಂದೆ ಸಮಯ ಪಡೆಯುವ ಸಲುವಾಗಿ ಅನಗತ್ಯವಾದ ವಿಳಂಬ ತಂತ್ರಗಳನ್ನು ಅನುಸರಿಸಲು ಪ್ರಾಧಿಕಾರಗಳಿಗೆ ಅವಕಾಶ ಇರುವುದಿಲ್ಲ.
4. ನ್ಯಾಯಾಲಯದ ಆದೇಶಗಳನ್ನು ರಾಜ್ಯ ಸರ್ಕಾರದ ಪ್ರಾಧಿಕಾರಗಳು ನಿರ್ಲಕ್ಷಿಸುವುದನ್ನು ತಡೆಯಬೇಕು ಮತ್ತು ಅಂತಹ ನಿರ್ಲಕ್ಷ್ಯ ಕಂಡು ಬಂದ ಸಂದರ್ಭದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಬೇಕು.
5. ನಿಗದಿತ ಸಮಯದೊಳಗೆ ಮಾನ್ಯ ನ್ಯಾಯಾಲಯದ ನಿರ್ದೇಶನಗಳನ್ನು ಅನುಷ್ಠಾನಗೊಳಿಸದಿದ್ದಲ್ಲಿ, ಇದು ಆದೇಶದ ಉದ್ದೇಶಪೂರ್ವಕ ಅವಿಧೇಯತೆಯಾಗುತ್ತದೆ ಮತ್ತು ನ್ಯಾಯಾಲಯದ ನಿಂದನೆಗೆ ಕಾರಣವಾಗುತ್ತದೆ. ನ್ಯಾಯಾಂಗ ನಿಂದನೆ ಪ್ರಕ್ರಿಯೆಯ ಪ್ರಾರಂಭದ ನಂತರ ಆದೇಶದ ಅನುಸರಣೆ ಇದ್ದರೂ ಸಹ ನ್ಯಾಯ ನಿಂದನೆ ಕಾಯ್ದೆಯಡಿ ಸಂಬಂಧಪಟ್ಟ ಅಧಿಕಾರಿಯು ಅವನ/ಅವಳ ಹೊಣೆಗಾರಿಕೆಯಿಂದ ಮುಕ್ತಗೊಳ್ಳುವುದಿಲ್ಲ.

6. ನ್ಯಾಯಾಲಯದ ಆದೇಶಗಳನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖಾ ಪ್ರಧಾನ ಕಾರ್ಯದರ್ಶಿಗಳು ನಿರ್ದೇಶನ ನೀಡತಕ್ಕದ್ದು.
7. ನ್ಯಾಯಾಲಯದ ಆದೇಶದಲ್ಲಿನ ನಿರ್ದೇಶನಗಳನ್ನು ಪಾಲಿಸದ ಸರ್ಕಾರಿ ನೌಕರನ ದುರ್ವರ್ತನೆಯನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಅದನ್ನು ಸಂಬಂಧಪಟ್ಟ ಸರ್ಕಾರಿ ನೌಕರನ ಸೇವಾ ದಾಖಲೆಗಳಲ್ಲಿ ನಮೂದಿಸತಕ್ಕದ್ದು.
8. ಸರ್ಕಾರಿ ಅಧಿಕಾರಿಯು ನ್ಯಾಯಾಲಯದ ಆದೇಶಗಳಿಗೆ ಅವಿಧೇಯರಾಗುವ ಮೂಲಕ ಎರಡು ಅಥವಾ ಅದಕ್ಕಿಂತ ಹೆಚ್ಚು ನ್ಯಾಯ ನಿಂದನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದರೆ, ಅವನ ವಿರುದ್ಧ ಇಲಾಖಾ ಶಿಸ್ತು ಕ್ರಮವನ್ನು ಕೈಗೊಳ್ಳತಕ್ಕದ್ದು.
9. ರಾಜ್ಯ ಸರ್ಕಾರವು ತೆರಿಗೆ ಪಾವತಿದಾರರ ಹಣದಿಂದ (ನಾಗರಿಕರು) ದಂಡವನ್ನು ಪಾವತಿಸಲು ಜವಾಬ್ದಾರಿ ಹೊಂದಿರುವುದಿಲ್ಲವಾದ್ದರಿಂದ, ಸಂಬಂಧಪಟ್ಟ ಅಧಿಕಾರಿಯು ಯಾವುದೇ ದಂಡ ಮತ್ತು ಅದರ ಪರಿಣಾಮಗಳಿಗೆ ವೈಯಕ್ತಿಕವಾಗಿ ಹೊಣೆಗಾರರಾಗತಕ್ಕದ್ದು.
10. ಸರ್ಕಾರವನ್ನು ಪ್ರತಿನಿಧಿಸುವ ಸರ್ಕಾರಿ ವಕೀಲರು ಸಂಬಂಧಪಟ್ಟ ಅಧಿಕಾರಿ/ನೌಕರರ ಸೂಚನೆ ಮೇರೆಗೆ ನ್ಯಾಯಾಲಯದ ಮುಂದೆ ಬಂಧನಕಾರಕವಾದ ಹೇಳಿಕೆಯನ್ನು ಸಲ್ಲಿಸಿದಾಗ, ಅಂತಹ ಹೇಳಿಕೆಗಳನ್ನು ಅನುಸರಣೆ ಮಾಡದಿದ್ದಲ್ಲಿ, ಅತ್ಯಂತ ಗಂಭೀರವಾಗಿ ಪರಿಗಣಿಸತಕ್ಕದ್ದು.
11. ನ್ಯಾಯಾಲಯ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆ ಮತ್ತು ಕ್ರಮಗಳನ್ನು "ಕರ್ನಾಟಕ ಸರ್ಕಾರಿ ವ್ಯಾಜ್ಯಗಳ ನಿರ್ವಹಣೆ ನಿಯಮಗಳು, 1985 ರನ್ವಯ ಅನುಸರಿಸತಕ್ಕದ್ದು.
12. ಮಾನ್ಯ ಸರ್ವೋಚ್ಚ ನ್ಯಾಯಾಲಯ ಅಥವಾ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಯಾವುದೇ ಮಧ್ಯಂತರ ಅಥವಾ ಇತರ ಆದೇಶಗಳ ಅನುಸರಣೆ ಸೇರಿದಂತೆ ನ್ಯಾಯಾಲಯ ಪ್ರಕರಣಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್‌ಎಆರ್/ಕೆಟಿವಿ/149/2019 ದಿನಾಂಕ 6.12.2020 ಮತ್ತು ಸೇರ್ಪಡೆ ಆದೇಶ 16.12.2020ರಲ್ಲಿ ನಿಗದಿಪಡಿಸಿರುವ ಹಂತ ಹಂತದ ಜವಾಬ್ದಾರಿಗಳು, ಸಮಯದ ಮಿತಿಯನ್ವಯ ನಿರ್ವಹಿಸತಕ್ಕದ್ದು.

ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಹಾಗೂ ಜಿಲ್ಲಾ ನ್ಯಾಯಾಂಗದಲ್ಲಿ ಬಾಕಿ ಇರುವ ಸರ್ಕಾರಿ ವ್ಯಾಜ್ಯಗಳ ನಿರ್ವಹಣೆಯ ಮೇಲ್ವಿಚಾರಣೆ ಮಾಡತಕ್ಕದ್ದು.

(ಪಿ. ರವಿಕುಮಾರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಇವರಿಗೆ:

1. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು

2. ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
3. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
4. ಅಡ್ವೋಕೇಟ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಕಟ್ಟಡ, ಬೆಂಗಳೂರು
5. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು
6. ಎಲ್ಲಾ ವಿಭಾಗಾಧಿಕಾರಿಗಳು/ ಎಲ್ಲಾ ಜಿಲ್ಲಾಧಿಕಾರಿಗಳು
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
9. ಮಾನ್ಯ ಕಾನೂನು ಸಚಿವರ ಆಪ್ತ ಕಾರ್ಯದರ್ಶಿಗಳು ವಿಧಾನಸೌಧ, ಬೆಂಗಳೂರು
10. ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ-1), ಕಾನೂನು ಇಲಾಖೆ, ವಿಧಾನಸೌಧ, ಬೆಂಗಳೂರು
11. ಶಾಖಾ ರಕ್ಷಾ ಕಡತ